1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂ: 1291/2015

ಪಿಡಬ್ಲೂ: 7 ಸಿಡಬ್ಲ್ಯೂ: 8

ಸಾಕ್ಷಿಯನ್ನು ದಿಃ 21.08.2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ |
| ತಂದೆಯ / ಗಂಡನ ಹೆಸರು | ನಾಗಾಚಾರಿ |
| ವಯಸ್ಸು | 34 |
| ಉದ್ಯೋಗ | ಅಕ್ಕಸಾಲಿಗ |
| ವಾಸ | ಮಳವಳ್ಳಿ ಟೌನ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

1. ಸೆಂಪ್ಟೆಂಬರ್ 2015 ರಲ್ಲಿ ಚಾಸ 16 ರವರು ನಮಗೆ ಕರೆಮಾಡಿ ಚಿನ್ನದ ಕಳ್ಳತನವಾಗಿರುವ ಬಗ್ಗೆ ತಿಳಿಸಿ ಒಡವೆಗಳನ್ನು ಪರೀಕ್ಷಿಸುವಂತೆ ಕೋರಿರುತ್ತಾರೆ. ಪೊಲೀಸರ ಕೋರಿಕೆ ಮೇರೆಗೆ ಪೊಲೀಸರ ಜೊತೆ ಇಲಾಖ ವಾಹನದಲ್ಲಿ ಬೆಂಗಳೂರಿಗೆ ತೆರಳಿರುತ್ತೇನೆ. 1 ನೇ ಆರೋಪಿ ಮನೆಯಲ್ಲಿದ್ದ ಚಿನ್ನವನ್ನು ವಶಪಡಿಸಿಕೊಂಡು ಮಳವಳ್ಳಿ ಗ್ರಾಮಾತಂರ ಪೊಲಿಸ್ ಠಾಣೆಗೆ ತಂದಿರುತ್ತಾರೆ ಅದನ್ನು ನಾನು ಪರಿಶೀಲಿಸಲಾಗಿ ಸದರಿ ಒಡವೆಗಳು ಚಿನ್ನದವೆಂದು ನಾನು ಕಂಡುಕೊಂಡಿರುತ್ತೇನೆ. ಆ ಬಗ್ಗೆನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಈಗ ಒಂದು ದಾಖಲಾತಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಅಮಾನತ ಮಹಜರ್ ಆಗಿದ್ದು ಅದನ್ನು ನಿ.ಪಿ-6 ಎಂದು ಗುರುತಿಸಲಾಯಿತು. ನಿ.ಪಿ-6 ರಲ್ಲಿ ತನ್ನ ಸಹಿಯನ್ನು ನಿ.ಪಿ-6(ಎ) ಎಂದು

ಗುರುತಿಸಲಾಯಿತು. ಆದಿನ ನನ್ನ ಸಮಕ್ಷಮ ಸುಮಾರು 10 ವಿಧದ ಒಡವೆಗಳನ್ನು ವಶಪಡಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಒಡವೆ ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಸ.ಸ.ಅ ರವರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಾಲಾಯಿತು .

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ